

ಚಿತ್ರಗಳು: ಎಸ್.ವಿ. ಹೂಗಾರ

ಎಚ್.ಎಸ್. ಮುಕ್ತಾಯಕ್ಕ

# ಸಂಜೆ ಉದಾಸವಾಗಿದೆ...

## 1

ನಾವು ರಾತ್ರಿ ಆಗಸದಲ್ಲಾಡುವಾಗ
ನನ್ನ ಕೇಶದಲ್ಲಿ ಸಿಕ್ಕುಸಿಕ್ಕಾಗಿ ಹೆಣೆದು
ಕೊಂಡ ನಕ್ಷತ್ರಗಳ ಬಿಡಿಸಿದ್ದು,
ಹೂವಿನ ಕಣಿವೆಯಲ್ಲಾಡುವಾಗ
ಅದರ ಗಂಧದಿಂದ ನನ್ನ ಮೈತುಂಬ
ಸೌರಮಂಡಲ ಚಿತ್ರಿಸಿದ್ದು,
ನನ್ನ ಕಂಗಳ ನೀಲಿಯಿಂದ ಆಕಾಶಕೆ
ಬಣ್ಣ ಬಳಿದದ್ದು,
ನೆನಪಾಗುತ್ತದೆ.
ಮತ್ತೆ ನೀನು ಹೇಳಿದ್ದು:
ನಾವು ಇಲ್ಲಿ ಸೇರಿದವರಲ್ಲ ಗೆಳತಿ;
ಅವನ ದೃಷ್ಟಿ ಅನಂತದೆಡೆಗೆ,
ಸೃಷ್ಟಿಯ ಮೊದಲ ಕನಸಿನೆಡೆಗೆ

## 2

ಸಮುದ್ರವನೆ ಕುಡಿಯಬೇಕೆಂದಿದ್ದೆ
ಅಯ್ಯೋ, ನಿನ್ನ ನೆನಪಿನ ಎರಡು ಹನಿ
ಕಣ್ಣೀರಿನಲೆ ಮುಳುಗಿ ಹೋದೆ
ಯಾರ ತಪ್ಪೊ, ಯಾವ ಅಪರಾಧವೊ,
ಅರಿಯೆ.
ಯಾರನೇಕೆ ದೂರುವಿ 'ಮುಕ್ತಾ'
ಗುಲಾಬಿಯ ಮೋಹಿಸಿದೆ;
ಮತ್ತೇಕೆ ಈ ಕಂಬನಿ?
ಹೃದಯ ಕೇಳುತ್ತದೆ!